# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 76(683) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಅ. ದೇವೇಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 11.12.2023 |

<table>
<tr><th>ಕ್ರಮ. ಸಂಖ್ಯೆ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ವಿಶ್ವವಿದ್ಯಾಲಯದ ಧನಸಹಾಯ ಆಯೋಗವು (ಯು.ಜಿ.ಸಿ) 10ನೇ ಯೋಜನೆಯಡಿಯಲ್ಲಿ ಬೆಂಗಳೂರು, ಮೈಸೂರು ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯಗಳಿಗೆ ಮಂಜೂರು ಮಾಡಿರುವ ಹುದ್ದೆಗಳೆಷ್ಟು;</td><td>ವಿಶ್ವವಿದ್ಯಾಲಯದ ಧನಸಹಾಯ ಆಯೋಗವು (ಯುಜಿಸಿ) 10ನೇ ಯೋಜನೆಯಡಿಯಲ್ಲಿ ಮೈಸೂರು ವಿಶ್ವವಿದ್ಯಾಲಯ, ಗುಲ್ಬರ್ಗಾ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಿಗೆ ಮಂಜೂರು ಮಾಡಿರುವ ಹುದ್ದೆಗಳ ವಿವರ ಈ ಕೆಳಕಂಡಂತಿವೆ.
<table>
<tr><th>ಕ್ರ. ಸಂ.</th><th>ವಿಶ್ವವಿದ್ಯಾಲಯದ ಹೆಸರು</th><th colspan="2">ಹುದ್ದೆಗಳ ವಿವರ ಮತ್ತು ಸಂಖ್ಯೆ</th></tr>
<tr><td rowspan="2">(1)</td><td rowspan="2">ಮೈಸೂರು ವಿಶ್ವವಿದ್ಯಾಲಯ</td><td>ಪ್ರವಾಚಕ</td><td>01</td></tr>
<tr><td>ಉಪನ್ಯಾಸಕ</td><td>13</td></tr>
<tr><td>(2)</td><td>ಗುಲ್ಬರ್ಗಾ ವಿಶ್ವವಿದ್ಯಾಲಯ</td><td>ಸಹಾಯಕ ಪ್ರಾಧ್ಯಾಪಕ</td><td>01</td></tr>
<tr><td rowspan="3">(3)</td><td rowspan="3">ಬೆಂಗಳೂರು ವಿಶ್ವವಿದ್ಯಾಲಯ</td><td>ಪ್ರಾಧ್ಯಾಪಕ</td><td>03</td></tr>
<tr><td>ಪ್ರವಾಚಕ</td><td>05</td></tr>
<tr><td>ಉಪನ್ಯಾಸಕ</td><td>11</td></tr>
</table></td></tr>
<tr><td>(ಆ)</td><td>10ನೇ ಯೋಜನೆಯಡಿ ಯು.ಜಿ.ಸಿ.ಯು ಈ ವಿಶ್ವವಿದ್ಯಾಲಯಗಳಿಗೆ ವಿಧಿಸಿರುವ ನಿಬಂಧನೆಗೆ ಮತ್ತು ಷರತ್ತುಗಳೇನು; ನಿಬಂಧನೆ ಹಾಗೂ ಷರತ್ತುಗಳಂತೆ ವಿಶ್ವವಿದ್ಯಾಲಯಗಳು ಪ್ರಸ್ತಾವನೆಗಳನ್ನು ಸಲ್ಲಿಸಿದೆಯೇ;</td><td>ವಿಶ್ವವಿದ್ಯಾಲಯದ ಧನಸಹಾಯ ಆಯೋಗವು (ಯುಜಿಸಿ) ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳು ಈ ಕಳಕಂಡಂತಿವೆ.
<table>
<tr><td>(1)</td><td>Assurance may be obtained from the state Government for taking over the liability of these posts after tenth plan period<br>or</td></tr>
<tr><td>(2)</td><td>Assurance may be given by the University through a resolution of the Executive Council to bear the burden of these posts after tenth plan<br>or</td></tr>
<tr><td>(3)</td><td>Appointment shall be made on contractual basis</td></tr>
</table></td></tr>
</table>

| | | |
|---|---|---|
| | | ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯ ಇವರು ಯು.ಜಿ.ಸಿ.ಯ 10ನೇ ಯೋಜನೆಯಡಿಯಲ್ಲಿನ ನೇಮಕಾತಿಯನ್ನು ಖಾಯಂ ಆಗಿ ನೇಮಕಾತಿ ಮಾಡಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.<br>ಬೆಂಗಳೂರು ವಿಶ್ವವಿದ್ಯಾಲಯವು ಯು.ಜಿ.ಸಿ ನೀಡಿರುವ 03 ನಿಬಂಧನೆಗಳಲ್ಲಿ 03ನೇ ನಿಬಂಧನೆಯನುಸಾರ ವಿಶ್ವವಿದ್ಯಾಲಯವು 10ನೇ ಯೋಜನೆ ಅವಧಿಗೆ (2002-2007) ದಿನಾಂಕ 07.11.2003ರಂದು ಒಟ್ಟು 19 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ ಗುತ್ತಿಗೆ ಆಧಾರದ ಮೇಲೆ ಒಟ್ಟು 16 ಹುದ್ದೆಗಳನ್ನು ಭರ್ತಿ ಮಾಡಿಕೊಂಡಿರುತ್ತದೆ. |
| (ಇ) | 10ನೇ ಯೋಜನೆಯಡಿ ಯು.ಜಿ.ಸಿ.ಗೆ ಈ ವಿಶ್ವವಿದ್ಯಾಲಯಗಳು 05 ವರ್ಷಗಳ ನಂತರವು ತಾತ್ಕಾಲಿಕ/ಅಡ್ ಹಾಕ್/ಗುತ್ತಿಗೆ/ಹೊರಗುತ್ತಿಗೆ ನೇಮಕಾತಿಯನ್ನು ಮುಂದುವರೆಸಲು ಲಿಖಿತ ಭರವಸೆಯ ಪ್ರಸ್ತಾವನೆಗಳನ್ನು ಸಲ್ಲಿಸಿದೆಯೇ; ಸಲ್ಲಿಸಿದ್ದಲ್ಲಿ, ಈ ಹುದ್ದೆಗಳಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆಯಲಾಗಿದೆಯೇ? (ಮಾಹಿತಿ ನೀಡುವುದು) | ಮೈಸೂರು, ಬೆಂಗಳೂರು ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯಗಳು ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತವೆ.<br>ಮೈಸೂರು ವಿಶ್ವವಿದ್ಯಾಲಯವು - ಯು.ಜಿ.ಸಿ.ಯ 10ನೇ ಯೋಜನೆಯಡಿ 5 ವರ್ಷಗಳ ನಂತರವು ತಾತ್ಕಾಲಿಕ/ಅಡ್‌ಹಾಕ್/ ಗುತ್ತಿಗೆ/ ಹೊರಗುತ್ತಿಗೆ ನೇಮಕಾತಿಯನ್ನು ಮುಂದುವರೆಸುವ ಕುರಿತು ಸಲ್ಲಿಸಿದ್ದ ಪ್ರಸ್ತಾವನೆಯ ಸಂಬಂಧವಾಗಿ ಆರ್ಥಿಕ ಇಲಾಖೆಯ ಸಹಮತಿ ಪಡೆದು, "ಸದರಿ ಹುದ್ದೆಗಳಿಗೆ ಬ್ಲಾಕ್ ಗ್ರಾಂಟ್‌ನಲ್ಲಿ ಹೆಚ್ಚುವರಿ ಹಣ ಒದಗಿಸುವ ಅವಶ್ಯಕತೆ ಇರುವುದಿಲ್ಲ. ಆದುದರಿಂದ, ವಿಶ್ವವಿದ್ಯಾಲಯಕ್ಕೆ ಲಭ್ಯವಿರುವ ಯೋಜನಾ ಅನುದಾನದಡಿಯಲ್ಲಿ ಸದರಿ ಹುದ್ದೆಗಳನ್ನು ಮುಂದುವರೆಸಿಕೊಂಡು ಸಂಬಳವನ್ನು ವಿಶ್ವವಿದ್ಯಾಲಯವು ನೀಡಲು ಅಭ್ಯಂತರ ವಿರುವುದಿಲ್ಲವೆಂದು" ಮೈಸೂರು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಲಾಗಿದೆ.<br>ಗುಲ್ಬರ್ಗಾ ವಿಶ್ವವಿದ್ಯಾಲಯವು - ಯು.ಜಿ.ಸಿ.ಯ 10ನೇ ಯೋಜನೆಯಡಿ 5 ವರ್ಷಗಳ ನಂತರವು ತಾತ್ಕಾಲಿಕ/ ಅಡ್‌ಹಾಕ್/ ಗುತ್ತಿಗೆ/ ಹೊರಗುತ್ತಿಗೆ ನೇಮಕಾತಿಯನ್ನು ಮುಂದುವರೆಸುವ ಕುರಿತು ಸಲ್ಲಿಸಿದ್ದ ಪ್ರಸ್ತಾವನೆಯ ಕುರಿತಂತೆ ಯು.ಜಿ.ಸಿ.ಯ ಮಾರ್ಗಸೂಚಿಸಿ/ನಿಯಮಾವಳಿಗಳನ್ವಯ ಪರಿಶೀಲಿಸಿ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ ತಿಳಿಸಲಾಗಿದೆ. |

| | | |
|---|---|---|
| | | ಬೆಂಗಳೂರು ವಿಶ್ವವಿದ್ಯಾಲಯವು - ಯು.ಜಿ.ಸಿ.ಯ 10ನೇ ಯೋಜನೆಯ ಅವಧಿಗೆ ಮಂಜೂರು ಮಾಡಲಾಗಿದ್ದ ವಿವಿಧ 19 ಹುದ್ದೆಗಳಲ್ಲಿ 16 ಹುದ್ದೆಗಳಿಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳಲ್ಲಿ, 05 ವರ್ಷಗಳ ಅವಧಿಯ ನಂತರ ಆಯಾಯಾ ವಿಭಾಗದ ಅಗತ್ಯತೆಯ ಮೇರೆಗೆ 04 ಜನ ಸಿಬ್ಬಂದಿಗಳ ಸೇವೆಯು ಅಗತ್ಯತೆ ಇರುವ ಬಗ್ಗೆ ಸಂಬಂಧಪಟ್ಟ ವಿಭಾಗದಿಂದ ಕೋರಿಕೆ ಬಂದಿಲ್ಲದ ಕಾರಣ ಉಳಿದ "12 ಸಿಬ್ಬಂದಿಗಳ ಸೇವೆಯನ್ನು ಸದರಿ ಯೋಜನೆಯ ಅವಧಿ ಮುಗಿದ ನಂತರ ಮುಂದುವರೆಸಲು ಸಲ್ಲಿಸಲಾಗಿದ್ದ ಪ್ರಸ್ತಾವನೆಯ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿ ಪಡೆದು, "ಆಯಾ ಹುದ್ದೆಗಳಲ್ಲಿ ಗುತ್ತಿಗೆ ಆಧಾರ ಮೇಲೆ ನೇಮಕಗೊಂಡಿರುವ 12 ಸಿಬ್ಬಂದಿಯನ್ನು ಈಗಿರುವ ಸೇವಾ ಷರತ್ತಿನ ಆಧಾರದ ಮೇಲೆ ಮುಂದುವರೆಸಲು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು 2007-08ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ನಿಗಧಿಪಡಿಸಿರುವ ಯೋಜನಾ ಅನುದಾನದ ಮಿತಿಯಲ್ಲಿ ಭರಿಸಬೇಕೆಂಬ ಷರತ್ತಿನ ಮೇರೆಗೆ ಸರ್ಕಾರದ ಅನುಮತಿ ನೀಡಲಾಗಿದೆ". |

ಸಂಖ್ಯೆ: ಇಡಿ/497/ಯುಬಿವಿ/2023

**(ಡಾ|| ಎಂ.ಸಿ. ಸುಧಾಕರ್)**

ಉನ್ನತ ಶಿಕ್ಷಣ ಇಲಾಖೆ ಸಚಿವರು,